ಮನುಷ್ಯನ ಆತ್ಮ

ಭಾಗ – 1

ಅಧ್ಯಯನ # 12

ಸತ್ಯವೇದದಲ್ಲಿರುವ
ಮಹಾ ಸತ್ಯೋಪದೇಶಗಳು

"ನಿನ್ನ ವಾಕ್ಯವೇ ಸತ್ಯವು" - ಯೋಹಾನನು 17:17

ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

ಅಧ್ಯಯನ # 12

ಮನುಷ್ಯನ ಆತ್ಮ ಭಾಗ-1

ದಯವಿಟ್ಟು ಗಮನಿಸಿ: ಈ ತರಗತಿಯಲ್ಲಿ ತಿಳಿಸಲಾಗಿರುವ ಎಲ್ಲಾ ವಾಕ್ಯಗಳನ್ನು ಸತ್ಯವೇದದಲ್ಲಿ ಓದುವ ಮೂಲಕ ನಿಮ್ಮ ಅಭ್ಯಾಸವನ್ನು ಮುಂದುವರಿಸಿರಿ.

ಇಲ್ಲಿ ಉಪಯೋಗಿಸಿರುವ ಅತ್ಯಧಿಕವಾದ ವಾಕ್ಯಭಾಗಗಳು(ಕೆ.ಜೆ.ವಿ) ಭಾಷಾಂತರದಿಂದ ತೆಗೆದುಕೊಳ್ಳಲಾಗಿದೆ.

ಈ ದಿನ ನಾವು ಮನುಷ್ಯನ ಆತ್ಮವನ್ನು ಕುರಿತು ಅಭ್ಯಾಸ ಮಾಡಲಿದ್ದೇವೆ –

ಆತ್ಮ ಎಂದರೇನು?

ಮತ್ತು ಉಸಿರು ಎಂದರೇನು?

ಸಾಮಾನ್ಯವಾಗಿ ಇವುಗಳನ್ನು ಅದಲು ಬದಲಾಗಿ ಉಪಯೋಗಿಸುವುದರಿಂದ ಇವೆರಡೂ ಒಂದೇ ಆಗಿದೆಯೇ?

ಆತ್ಮವನ್ನು ಕುರಿತು ವಿವಿಧ ಧರ್ಮದಲ್ಲಿ ಮತ್ತು ವಿಜ್ಞಾನಿಗಳಿಗೆ ಇರುವ ವಿಚಾರವೇನು?

ಈಗ ಇದರ ವಿಚಾರವನ್ನು ಕುರಿತು ಮೊದಲು ನೋಡೋಣ –

ಹಿಂದೂ

ಇವರು ಆತ್ಮವನ್ನು ಅದೃಶ್ಯ (ಅಂದರೆ **ಕಣ್ಣಿಗೆ ಕಾಣದೆ** ಇರುವುದು) ಅಮರವಾದದ್ದೆಂದು ನಂಬುತ್ತಾರೆ.....

ಒಬ್ಬರು ಸತ್ತಾಗ ಅವರ ಆತ್ಮವು ಅವರ

ದೇಹದಿಂದ ಇನ್ನೊಂದು ಹೊಸ ದೇಹದಲ್ಲಿ ಸೇರುತ್ತದೆ –
ಇದನ್ನು ಪುನರ್‌ಜನ್ಮ ಎಂದು ಕರೆಯಲಾಗುತ್ತದೆ!!
ಈ ಕಾರ್ಯವು ಆತ್ಮವು ಪರಿಪೂರ್ಣತೆ ಹೊಂದುವವರೆಗೂ ಮುಂದುವರಿಯುತ್ತದೆ,
ಕೊನೆಯದಾಗಿ ಆತ್ಮವು ಪರಮಾತ್ಮ ಅಥವಾ ದೇವರ ಬಳಿಗೆ ಹೋಗಿ ಸೇರುತ್ತದೆ.

ಮುಸ್ಲಿಂ

ಇವರು ಆತ್ಮವನ್ನು ಅಲ್ಲಾ ಸೃಷ್ಟಿಸಿದನೆಂದು ನಂಬುತ್ತಾರೆ.
(ಉರ್ದು ಭಾಷೆಯಲ್ಲಿ "ರೂಹ್" ಎನ್ನುತ್ತಾರೆ) ಮತ್ತು ಆತ್ಮವನ್ನು ದೇಹದಲ್ಲಿ ಸೇರಿಸಿ
ಅವರನ್ನು ಭೂಮಿಗೆ ಕಳುಹಿಸಿ, ಅವರು ಅಲ್ಲಾವನ್ನು ನೆನೆಸಿಕೊಂಡು, ಗೌರವ
ಕೊಡುತ್ತಾರೆಯೇ ಎಂದು ಪರೀಕ್ಷಿಸುತ್ತಾರೆ ಎಂಬುದಾಗಿ ನಂಬುತ್ತಾರೆ.

ಈ ಆತ್ಮಗಳು ಅದೃಶ್ಯ ಮತ್ತು ಅಮರ,
ಮತ್ತು ನಾಶಗೊಳಿಸಲು ಆಗುವುದಿಲ್ಲ
ಎನ್ನುತ್ತಾರೆ. ಅಲ್ಲಾವನ್ನು ಗೌರವಿಸುವ
ಮತ್ತು ಆರಾಧಿಸುವ ಮತ್ತು
ವಿಧೇಯರಾಗಿರುವ ಎಲ್ಲಾ ಆತ್ಮಗಳಿಗೆ
ನಿತ್ಯಪರದೈಸಿಯು ಲಭಿಸುತ್ತದೆ ಮತ್ತು
ಬೇರೆ ಎಲ್ಲಾ ಅವಿಧೇಯ ಆತ್ಮಗಳನ್ನು
ನಿತ್ಯ ಯಾತನೆಯಲ್ಲಿ ಹಾಕಲಾಗುತ್ತದೆ. –
ಇದನ್ನು **"ಡೋಜಕ್"** (ಅಥವಾ
ನರಕ) ಎಂದು ಕರೆಯಲಾಗುತ್ತದೆ, ಇಲ್ಲಿ ನಿತ್ಯಕಾಲವೂ ಅವರನ್ನು ಯಾತನೆ,
ಚಿತ್ರಹಿಂಸೆ ಪಡಿಸಲಾಗುತ್ತದೆ!!

ಬುದ್ಧರು

ಇವರು ಆತ್ಮವು ಅದೃಶ್ಯ ಮತ್ತು
ಅಮರವಾದದ್ದು ಎಂದು ನಂಬುತ್ತಾರೆ.

ಮತ್ತು ಇವರ ಜೀವನದ ಗುರಿಯು
"ನಿರ್ವಾಣ" ಅಥವಾ "ಮೋಕ್ಷ"
(ಪುನರ್‌ಜನ್ಮದ ವಿಧಾನದಿಂದ

ಬಿಡುಗಡೆ ಹೊಂದುವದು.) ಇವರ ಪ್ರಕಾರ "ಆತ್ಮವು" ಸರಣಿ0ಯಾಗಿ ಅನೇಕ ದೇಹದೊಳಗೆ ಅಂದರೆ ಮನುಷ್ಯನ ದೇಹ ಮಾತ್ರವಲ್ಲದೆ ಪ್ರಾಣಿಗಳು, ಪಕ್ಷಿಗಳು, ಕ್ರಿಮಿಕೀಟಗಳು,
ಮೀನು ಇತರೆ, ದೇಹದೊಳಗೆ ಪ್ರವೇಶಿಸಿದ ನಂತರವೇ "ನಿರ್ವಾಣ" ಅಥವಾ "ಮೋಕ್ಷ"ವನ್ನು ಹೊಂದುತ್ತದೆ.

ಆತ್ಮವು ನಾಶವಾಗುವುದಿಲ್ಲ ಆದರೆ ದೇಹ ಮಾತ್ರ ಸಾ0ಯುತ್ತದೆ!

ರೋಮನ್ ಕ್ಯಾಥೊಲಿಕ್

ಈಗ ಕ್ರೈಸ್ತರು ಮತ್ತು ಅವರ ಎರಡು ವಿಭಾಗದವರು.....
ನಂಬುವುದೇನೆಂದರೆ ಆತ್ಮವು ಅದೃಶ್ಯ ಮತ್ತು ಅಮರವಾದದ್ದು ಮತ್ತು ಸತ್ತ ನಂತರ ಆತ್ಮವು ದೇಹವನ್ನು ಬಿಟ್ಟು ತತ್‌ಕ್ಷಣ ನ್ಯಾ0ಯ ತೀರ್ಪಿಗೆ ದೇವರ ಸಿಂಹಾಸನದ ಮುಂದೆ (ಅದರ ಜೀವಕ್ಕಾಗಿ) ನಿಂತುಕೊಳ್ಳುತ್ತದೆ. (ಆಧಾರವಾಕ್ಯ: ಪ್ರಕಟನೆ 20:12 **REFERENCE**)

(ಇದಲ್ಲದೆ ಸತ್ತವರಾದ ದೊಡ್ಡವರೂ ಚಿಕ್ಕವರೂ ಸಿಂಹಾಸನದ ಮುಂದೆ ನಿಂತಿರುವದನ್ನು ಕಂಡೆನು. ಆಗ ಪುಸ್ತಕಗಳು ತೆರೆಯಲ್ಪಟ್ಟವು; ಜೀವಬಾಧ್ಯರ ಪಟ್ಟಿ ಎಂಬ ಇನ್ನೊಂದು ಪುಸ್ತಕವು ತೆರೆಯಲ್ಪಟ್ಟಿತು;ಆ ಪುಸ್ತಕಗಳಲ್ಲಿ ಬರೆದಿದ್ದ ಸಂಗತಿಗಳ ಆಧಾರದಿಂದ ಅವರವರ ಕೃತ್ಯಗಳ ಪ್ರಕಾರ ಸತ್ತವರಿಗೆ ನ್ಯಾಯತೀರ್ಪಾಯಿತು.)

....ಮತ್ತು ಅವರು ಪರಲೋಕ ಅಥವಾ ನರಕವನ್ನು ಹೊಂದುತ್ತಾರೆ. ಇದಲ್ಲದೆ ಪರಲೋಕಕ್ಕೆ ಹೋಗಲು ಅತಿ 0ಯೋಗ್ಯರೂ ಅಲ್ಲ ಮತ್ತು ನರಕಕ್ಕೆ ಕಳುಹಿಸಲು ಅಷ್ಟೊಂದು ಕೆಟ್ಟವರೂ ಅಲ್ಲ,
ಅ0ತಹವರನ್ನು ಕೆಲವು ಕಾಲ ಶುದ್ಧೀಕರಿಸಿದ ನಂತರ ಅವರ ಆತ್ಮವು ಪರಲೋಕಕ್ಕೆ ಸಿದ್ಧವಾಗುತ್ತದೆ!

ಈ ವಿಧವಾದ ಬೋಧನೆಗಳಿಗೆ ಸತ್ಯವೇದದಲ್ಲಿ 0ಯಾವ ಆಧಾರವೂ ಇಲ್ಲ.

ಆದ್ದರಿಂದ ಶರೀರವು ಸತ್ತ ನಂತರವೂ ಆತ್ಮವೂ ಜೀವಂತವಾಗಿರುತ್ತದೆ ಮತ್ತು ಈ ಆತ್ಮಗಳಿಗಾಗಿ ಪತ್ಯೇಕ ದಿನವನ್ನು ನೇಮಿಸಿ ಪ್ರಾರ್ಥಿಸಲಾಗುತ್ತದೆ. ಇದನ್ನು "ಎಲ್ಲಾ ಆತ್ಮಗಳ ದಿನ"ವೆಂದು ಕರೆಯಲಾಗುತ್ತದೆ ಮತ್ತು ಇದನ್ನು ನವೆಂಬರ್ 2ನೇ ತಾರೀಖು ಆಚರಿಸಲಾಗುತ್ತದೆ.

ಪ್ರೊಟೆಸ್ಟೆಂಟ್

ಇವರು ನಂಬುವುದೇನೆಂದರೆ ಆತ್ಮವು ಅದೃಶ್ಯವಾದದ್ದು ಮತ್ತು ಅಮರವಾದದ್ದು ಮತ್ತು ಆತ್ಮವು ಮರಣದಲ್ಲಿ "ನಿದ್ರೆ" ಮಾತ್ರ ಹೊಂದುತ್ತದೆ ಆದರೆ ನ್ಯಾಯ ತೀರ್ಪಿನ ದಿನದಲ್ಲಿ ಎದ್ದು ಬರುತ್ತದೆ ಮತ್ತು ಯೇಸುವನ್ನು ಅಂಗೀಕರಿಸಿದವರೆಲ್ಲರೂ ರಕ್ಷಣೆ ಹೊಂದುವರು.

(ಆಧಾರ ವಾಕ್ಯ : ಅಪೋ 4:12 –
"ರಕ್ಷಣೆಯು ಇನ್ಯಾರಲ್ಲಿಯೂ ಇಲ್ಲ; ಯಾಕಂದರೆ ಆಕಾಶದ ಕೆಳಗೆ ಮನುಷ್ಯರಲ್ಲಿ ಕೊಡಲ್ಪಟ್ಟಿರುವ ಬೇರೆ ಯಾವ ಹೆಸರಿನಿಂದಲೂ ನಮಗೆ

ರಕ್ಷಣೆಯಾಗುವದಿಲ್ಲ ಎಂದು ಹೇಳಿದನು.")

....ಮತ್ತು ಪರಲೋಕಕ್ಕೆ ಹೋಗುವರು ಮತ್ತು ಉಳಿದವರೆಲ್ಲರೂ ನರಕದ ನಿತ್ಯ0ಯಾತನೆಗೆ ಹೋಗುವರು.

ಅನೇಕ ಪ್ರೊಟೆಸ್ಟೆಂಟರು ಪ್ರಾಸಂಗಿಕವಾಗಿ ನಂಬುವುದೇನೆಂದರೆ ಆತ್ಮಗಳು ತತ್‌ಕ್ಷಣ ಪರಲೋಕ ಮತ್ತು ನರಕಕ್ಕೆ ಹೋಗುತ್ತದೆ ಮತ್ತು ನ್ಯಾ0ಯ ತೀರ್ಪಿನ ದಿನದಲ್ಲಿ ನ್ಯಾ0ಯ ತೀರ್ಪನ್ನು ಹೊಂದುವದಕ್ಕೆ ಹಿಂದಿರುಗಿ ಮತ್ತೆ ಪರಲೋಕ ಮತ್ತು ನರಕಕ್ಕೆ ಹೋಗುತ್ತದೆ!!!

ಆದ್ದರಿಂದ ಈಗಿನ ದೇವಸೇವಕರ ಮುಖ್ಯವಾದ ಪ್ರ0ಯಾಸವು ಆತ್ಮಗಳನ್ನು ನರಕದಿಂದ ಕಾಪಾಡುವುದು!

ಒಬ್ಬ ಪ್ರೊಟೆಸ್ಟೆಂಟ್ ಸೇವಕನು ಹತ್ತು ಲಕ್ಷ ಆತ್ಮಗಳನ್ನು ಒಂದೇ ಒಂದು(ಕಡಲೆ) ಚಿಪ್ಪಿನಲ್ಲಿ ಇಡಬಹುದೆಂದು ಹೇಳಿದನು!

ಆತನ ಏನು ಹೇಳಲು ಪ್ರ0ಯತ್ನಿಸುತ್ತಿದ್ದಾನೆಂದರೆ ಆತ್ಮವು ಅದೃಶ್ಯ ಮತ್ತು "ದೇಹವಿಲ್ಲದೆ" ಇರುವದು!

ವಿಜ್ಞಾನಿಗಳು

ಇವರು ಆತ್ಮವು ರಹಸ್ಯವಾಗಿರುವುದು ಸತ್ಯವೆಂದು ನಂಬುತ್ತಾರೆ.
ಏಕೆಂದರೆ ಅನೇಕ ಪ್ರ0ಯೋಗಗಳು ಇದನ್ನು ಸಾಬೀತು ಪಡಿಸಿದೆ.

ಇನ್ನು ಸ್ವಲ್ಪ ಹೊತ್ತಿನಲ್ಲಿ ಸಾ0ಯುವ ಮನುಷ್ಯನನ್ನು ಸ್ವಲ್ಪವೂ ಗಾಳಿ ಹೋಗದ ದಪ್ಪದಾದ ಗಾಜಿನ ಪೆಟ್ಟಿಗೆ0ಯಲ್ಲಿ
ಕ್ಯಾಮೆರಾ (ಛಾ0ಯಾ ಚಿತ್ರದ ಸಾಮಾಗ್ರಿ) ವನ್ನು ಅಳವಡಿಸಿ ಆ "ರಹಸ್ಯವನ್ನು" ಚಿತ್ರೀಕರಿಸಿದ್ದರು ಮತ್ತು 0ಯಾವ ಮನುಷ್ಯನು ಅಡ್ಡ ಬರದೆ ಆ ದಪ್ಪದಾದ ಗಾಜು ತಾನಾಗಿ0ಯೇ ಬಿರುಕು ಬಿಟ್ಟಿತು!

ಆದ್ದರಿಂದ ಅವರು ನಂಬುವುದೇನೆಂದರೆ "ಆತ್ಮವೇ" ಸಾ0ಯುವ ಸಮ0ಯದಲ್ಲಿ ಗಾಜನ್ನು ಬಿರುಕು ಮಾಡಿ ಶರೀರವನ್ನು ಬಿಟ್ಟು ತಪ್ಪಿಸಿಕೊಂಡಿರಬೇಕು!!

ಆದ್ದರಿಂದ ನಾವು ನೋಡಿದ್ದೇನೆಂದರೆ ಎಲ್ಲಾ ಮತಗಳು,
ಕ್ರೈಸ್ತರು ಮತ್ತು ವಿಜ್ಞಾನಗಳೂ ಸೇರಿ ನಂಬುವುದೇನೆಂದರೆ ಆತ್ಮವು.....

1. ಅದೃಶ್ಯವಾದದ್ದು ಮತ್ತು ಕಣ್ಣಿಗೆ ಕಾಣದೆಯಿರುವದು.
2. ಅಮರವಾದದ್ದು, ನಾಶವಿಲ್ಲದಿರುವದು ಮತ್ತು ಸಾಯುವುದಿಲ್ಲ!

ಹಾಗಾದರೆ ಆತ್ಮದ ಬಗ್ಗೆ ಸತ್ಯವೇದವು ನಮಗೆ ಏನು ಬೋಧಿಸುತ್ತದೆ?

ಸತ್ಯವೇದದಲ್ಲಿ ಇದೇ ಅಭಿಪ್ರಾಯವಿದೆಯೇ?

ಈ ವಿಷಯವನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದೋಣ–

ಯೆಹೆಜ್ಕೇಲನು 18:4,20

"ಇಗೋ ಸಕಲ ಪ್ರಾಣಗಳು ನನ್ನವೇ; ತಂದೆಯೇನು, ಮಗನೇನು, ಪ್ರಾಣಗಳೆಲ್ಲವು ನನ್ನಧೀನದಲ್ಲಿವೆ;ಪಾಪಮಾಡುವ ಪ್ರಾಣವು ತಾನಾಗಿಯೇ ಸಾಯುವುದು."
"ಪಾಪಮಾಡುವವನೇ ಸಾಯುವನು; ಮಗನು ತಂದೆಯ ದೋಷಫಲವನ್ನು ಅನುಭವಿಸನು, ತಂದೆಯು ಮಗನ ದೋಷಫಲವನ್ನು ಅನುಭವಿಸನು; ಶಿಷ್ಟನ ಶಿಷ್ಟತನದ ಫಲವು ಶಿಷ್ಟನದೇ,"

ಸ್ಮೃತಿ ತಪ್ಪಿಸುವಂತಹ ಪ್ರಕಟನೆ ಏನೆಂದರೆ
"ಪಾಪ ಮಾಡುವ ಪ್ರಾಣವೇ (ಆತ್ಮವು) ಸಾಯುವನು"

"……the soul that sinneth, it SHALL DIE." !

ಹೌದು! ಸತ್ಯವೇದವು ನಮಗೆ ಬೋಧಿಸುವುದೇನೆಂದರೆ ಆತ್ಮವು ಸಾಯಬಲ್ಲದು ಮತ್ತು..... ಪಾಪ ಮಾಡುವ ಎಲ್ಲಾ ಆತ್ಮಗಳು ಸಾಯಲೇ ಬೇಕು!

ಎಲ್ಲರೂ ಪಾಪಿಗಳಾಗಿರುವುದರಿಂದ.....ಎಲ್ಲಾ ಆತ್ಮಗಳು, ಸಾ0ಯಲೇಬೇಕು!

ಆದ್ದರಿಂದ ಈ ನಿಜಾಂಶವನ್ನು ವಾಕ್ಯದಲ್ಲಿ ಓದುತ್ತೇವೆ –

ಕೀರ್ತನೆ 22:29

" ತಮ್ಮ ಜೀವವನ್ನು(ಆತ್ಮವನ್ನು) ಉಳಿಸಿಕೊಳ್ಳಲಾರದೆ ಮಣ್ಣುಪಾಲಾಗುವವರೆಲ್ಲರೂ ಆತನಿಗೆ ಅಡ್ಡಬೀಳುವರು. "

ಹೌದು! ಮನುಷ್ಯ ಜಾತಿ0ಯ 0ಯಾವ ಆತ್ಮವೂ ಸಹ ಮರಣದಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ – ಎಲ್ಲಾ ಆತ್ಮಗಳು ಸಾ0ಯುತ್ತದೆ!

ಹೌದು! ಶರೀರ ಮಾತ್ರ ಸಾ0ಯುವುದಲ್ಲದೆ...ಆತ್ಮವು ಸಾ0ಯುತ್ತದೆ!

ಹೌದು! ಇದನ್ನೇ ಸತ್ಯವೇದವು ನಮಗೆ ಬೋಧಿಸುತ್ತದೆ!

ನಿಮಗೆ ಆಶ್ಚರ್ಯವಾಗಿದೆಯೇ???

ಈ ಆತ್ಮದ ಮರಣ ಅಥವಾ ನಾಶನವನ್ನು ಕುರಿತು ಹಳೆ0ಯ ಹಳೆ ಒಡಂಬಡಿಕೆಯಲ್ಲಿ ಖಚಿತಪಡಿಸಲಾಗಿದೆ –

ಕೆಲವು ವಾಕ್ಯವನ್ನು ಓದೋಣ –

ಕೀರ್ತನೆ 33:19; 40:1; 56:12

"ಅವರ ಪ್ರಾಣವನ್ನು ಮರಣದಿಂದ ತಪ್ಪಿಸುವನು; ಬರಗಾಲದಲ್ಲಿ ಅವರ ಜೀವವನ್ನು ಉಳಿಸುವನು."

"ನಾನು ಯೆಹೋವನಿಗೋಸ್ಕರ ನಿರೀಕ್ಷಿಸಿಯೇ ನಿರೀಕ್ಷಿಸಿದೆನು; ಆತನು ನನ್ನ ಮೊರೆಗೆ ಕಿವಿಗೊಟ್ಟು ಲಕ್ಷಿಸಿದನು."

"ದೇವರೇ, ನಾನು ಜೀವದಿಂದ ಬೆಳಕಿನಲ್ಲಿದ್ದು ನಿನಗೆ ನಡೆದುಕೊಳ್ಳಬೇಕೆಂದು ನೀನು ನನ್ನ ಪ್ರಾಣವನ್ನು ಮರಣಕ್ಕೆ ತಪ್ಪಿಸಿ ನನ್ನ ಪಾದಗಳನ್ನು ಎಡವದಂತೆ ಕಾದಿದ್ದೀ."

ಹೌದು! ಹಳೆ ಒಡಂಬಡಿಕೆಯ ಈ ಎಲ್ಲಾ ವಾಕ್ಯಗಳು ಮರಣ ಮತ್ತು ನಾಶನದಿಂದ ಆತ್ಮವನ್ನು ರಕ್ಷಿಸುವ ಮತ್ತು ವಿಮೋಚಿಸುವ ಬಗ್ಗೆ ಮಾತಾಡುತ್ತದೆ. ಈ ಆತ್ಮ ಅಮರವಾಗಿದ್ದು, ಸಾಯದಿರುವಂಥದ್ದಾಗಿದ್ದರೆ, ಆತ್ಮವನ್ನು "ಮರಣದಿಂದ" ಹಾಗೂ "ನಾಶನದಿಂದ" ತಪ್ಪಿಸಿದಕ್ಕೆ ದೇವರಿಗೆ ಕೃತಜ್ಞತೆಯನ್ನು ಹೇಳುವಂಥಹ ಈ ಮಾತುಗಳ ಅವಶ್ಯಕತೆಯೇ ಇರುತ್ತಿರಲಿಲ್ಲ.

ಆದ್ದರಿಂದ ಇಲ್ಲಿ ಸ್ಪಷ್ಟವಾಗಿರುವುದೇನೆಂದರೆ ಸತ್ಯವೇದದ ಹಳೆ0ಯ ಒಡಂಬಡಿಕೆ0ಯ ಬೋಧನೆ ಏನೆಂದರೆ.....ಎಲ್ಲಾ ಆತ್ಮಗಳು ಸಾ0ಯುತ್ತದೆ!

ಈಗ ಹೊಸ ಒಡಂಬಡಿಕೆ0ಯು ಏನು ಹೇಳುತ್ತದೆ? ಅದು ಆತ್ಮದ ಮರಣವನ್ನು ಕುರಿತು ಮಾತನಾಡುತ್ತದೆ0ಯೇ?

ಸತ್ಯವೇದ ವಾಕ್ಯಗಳಲ್ಲಿ ಓದಿ ನೋಡೋಣ –

ಯಾಕೋಬನು 5:20; ಅಪೊಸ್ತಲರ ಕೃತ್ಯಗಳ 3:23

(Read from **KJV** Bible)

"ಒಬ್ಬ ಪಾಪಿಯನ್ನು ತಪ್ಪಾದ ಮಾರ್ಗದಿಂದ ತಿರುಗಿಸಿದವನು ಅವನ ಪ್ರಾಣವನ್ನು (ಆತ್ಮವನ್ನು) ಮರಣಕ್ಕೆ ತಪ್ಪಿಸಿ ಬಹು ಪಾಪಗಳನ್ನು ಮುಚ್ಚಿದವನಾದವನೆಂದು ತಿಳಿದುಕೊಳ್ಳಿರಿ"

"ಆ ಪ್ರವಾದಿಯ ಮಾತನ್ನು ಕೇಳದಿರುವ ಪ್ರತಿಯೊಬ್ಬ (ಆತ್ಮ)ನು ನಮ್ಮ ಜನರೊಳಗಿಂದ ಸಂಪೂರ್ಣವಾಗಿ ನಾಶವಾಗುವನು ಎಂಬದೇ."

ಹೌದು! ಆತ್ಮವು ಮರಣಹೊಂದುತ್ತದೆ ಮತ್ತು ನಾಶವಾಗುತ್ತದೆಂದು ಸ್ಪಷ್ಟವಾಗಿ ಹೇಳಿದೆ!

ಆತ್ಮವೂ ಸಹ ಸಾ0ಯುತ್ತದೆ ಮತ್ತು ನಾಶವಾಗುತ್ತದೆಂಬ ಸಮರಸವಾದ ಬೋಧನೆ0ಯನ್ನು ಹೊಸ ಒಡಂಬಡಿಕೆ0ಯಲ್ಲಿ ನೋಡಿದೆವು.

ಹಾಗಾದರೆ 0ಯೇಸುವಿನ ಆತ್ಮದ ಬಗ್ಗೆ ಏನು?

ಕಲ್ವಾರಿ ಶಿಲುಬೆ0ಯಲ್ಲಿ ಆತನು ಸಾತ್ತಾಗ, ಆತನ ಆತ್ಮವು, ಮರಣಹೊಂದಿತೆ?

0ಯೇಸುವಿನ ಸ್ವಂತ ಮಾತುಗಳ ಮೂಲಕ ಈ ಪ್ರಶ್ನೆಗೆ ಮುಖ್ಯವಾದ ಉತ್ತರವನ್ನು ನೋಡೋಣ –

ಮತ್ತಾಯ 26:38

"ನನ್ನ ಪ್ರಾಣವು (ಆತ್ಮವು) ಸಾಯುವಷ್ಟು ದುಃಖಕ್ಕೆ ಒಳಗಾಗಿದೆ...."

ಆಹಾ! ನೋಡಿದಿರಾ?

0ಯೇಸುವಿನ ಆತ್ಮವು ಸಾ0ಯದಿದ್ದರೆ ಏಕೆ ಆತನು ಸಾ0ಯುವಷ್ಟು ದುಃಖಕ್ಕೆ ಒಳಗಾಗುವುದನ್ನು ಕುರಿತು ಮಾತನಾಡುತ್ತಾರೆ?

ಹೌದು! ಏಕೆಂದರೆ 0ಯೇಸುವಿನ ಆತ್ಮವು ಮರಣ ಹೊಂದಬೇಕು, ಆದ್ದರಿಂದಲೇ ಆತನು ಈ ಮಾತುಗಳನ್ನು ಹೇಳಿದನು.

ಆದ್ದರಿಂದಲೇ ಆತನ ಮರಣವನ್ನು ಕುರಿತು ಪ್ರವಾದಿಸಿರುವುದನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

ಯೆಶಾಯ 53:12

"ತನ್ನ ಪ್ರಾಣ (ಆತ್ಮ)ವನ್ನು ಧಾರೆಯೆರೆದು ಮರಣಹೊಂದಿ..."

ಹೌದು! ಯೇಸುವಿನ ಆತ್ಮವೂ ಮರಣ ಹೊಂದಿತು! ಇದುವರೆಗೂ ಪಾಪ ಮಾಡುವ ಆತ್ಮವು ಮರಣ ಹೊಂದುತ್ತದೆ ಎಂದು ನೋಡಿದೆವು. ಆದರೆ ಯೇಸುವಿನ ವಿಷಯದಲ್ಲಿ ನೋಡುವುದಾದರೆ ಆತನ ಆತ್ಮವು ತನ್ನ ಸ್ವಂತ ಪಾಪಕ್ಕಾಗಿ ಅಲ್ಲ ಆದರೆ ಈ ಲೋಕದವರ ಪಾಪಗಳಿಗಾಗಿ ಮರಣ ಹೊಂದಿತು ಎಂದು ನೋಡುತ್ತೇವೆ. ಹೌದು! ಅದು ತ್ಯಾಗದ ಮರಣವಾಗಿದೆ!

ಆದ್ದರಿಂದ ಸತ್ಯವೇದವು ನಮಗೆ ಬೋಧಿಸುವುದೇನೆಂದರೆ ಎಲ್ಲಾ ಆತ್ಮಗಳು ಸಾಯುತ್ತದೆ - ಯೇಸುವಿನ ಆತ್ಮವೂ ಸಹ !!!

ಈಗ ನಾವು ಹೀಗೆ ಕೇಳಬಹುದು –

ಆತ್ಮಕ್ಕೆ ರಕ್ತವಿದೆಯೇ?

ಯಾರಾದರು ಹೀಗೆ ಕೇಳಬಹುದು, **"ಇದೆಂಥಾ ಪ್ರಶ್ನೆ"**?
ಸಾಮಾನ್ಯವಾಗಿ ನಂಬುವದೇನೆಂದರೆ ಶರೀರಕ್ಕೆ ಮಾತ್ರ ರಕ್ತವಿದೆ ಮತ್ತು ಆತ್ಮಕ್ಕೆ ರಕ್ತವಿಲ್ಲ!

ಈಗ ಇದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದೋಣ –

ಯೆರೆಮೀಯ 2:34

" ಇದಲ್ಲದೆ ನಿರ್ದೋಷಿಗಳಾದ ದರಿದ್ರರ ಪ್ರಾಣ(ಆತ್ಮ) ರಕ್ತವು ನಿನ್ನ ನೆರೆಗೆಯಲ್ಲಿ ಅಂಟಿಕೊಂಡಿದೆ."

ಹೌದು! ಸತ್ಯವೇದದ ಪ್ರಕಾರ ಆತ್ಮಕ್ಕೆ ರಕ್ತವಿದೆ!

ಇದರೊಂದಿಗೆ ನಮಗೆ....ಇನ್ನೊಂದು ಮಹಾಸತ್ಯವು ಸತ್ಯವೇದದಿಂದ ದೊರಕಿದೆ !

ಹೌದು! ರಕ್ತವು ಕಣ್ಣಿಗೆ ಕಾಣುವುದರಿಂದ.....ಆತ್ಮವೂ ಕಾಣಬೇಕು!

ಮತ್ತು ಆತ್ಮದ ಇನ್ನೊಂದು ವಿಷಯವನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಹೀಗೆ ಓದುತ್ತೇವೆ –

ಯೆಹೋಶುವ 11:11

"ಒಂದು ಪ್ರಾಣಿಯಾದರೂ ಉಳಿಯಲಿಲ್ಲ." **(ಕೆ.ಜೆ.ವಿ.ಯಲ್ಲಿ ಮಾತ್ರ ಕಾಣಬಹುದು)**

ಹೌದು! ಆತ್ಮಗಳನ್ನು...ಕತ್ತಿಯಿಂದ ಕತ್ತರಿಸಬಹುದು!!!

ಈಗ ನಿಮಗೆ ನಿಜವಾಗಿಯೂ ಆಶ್ಚರ್ಯವಾಗಿರಬಹುದು ಮತ್ತು.....ನಿಮ್ಮಲ್ಲಿರುವ **ದೊಡ್ಡ ಪ್ರಶ್ನೆ** ಏನೆಂದರೆ –

ನಿಜವಾಗಿಯೂ ಆತ್ಮವೆಂದರೇನು?

ಸತ್ಯವೇದದ ಪ್ರಕಾರ
ಆತ್ಮವು ಕಣ್ಣಿಗೆ ಕಾಣುತ್ತದೆ ಮತ್ತು.....ಅದು ಮರಣ ಅಥವಾ ನಾಶ ಹೊಂದುತ್ತದೆ!

ಈ ಪ್ರಶ್ನೆಗೆ ಸ್ವತಃ ದೇವರೇ ಸರಿಯಾಗಿ ಉತ್ತರ ಕೊಡಬಲ್ಲನು ಏಕೆಂದರೆ....

ಆತನೇ ಆತ್ಮವನ್ನು ಸೃಷ್ಟಿಸಿದನು ಎಂಬುದಾಗಿ ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

ಆದಿಕಾಂಡ 2:7

"ಹೀಗಿರಲು ಯೆಹೋವ**(ಕರ್ತನಾದ)** ದೇವರು ನೆಲದ ಮಣ್ಣಿನಿಂದ ಮನುಷ್ಯನನ್ನು ರೂಪಿಸಿ ಅವನ ಮೂಗಿನಲ್ಲಿ ಜೀವಶ್ವಾಸವನ್ನು ಊದಿದನು; ಆಗ ಮನುಷ್ಯನು ಬದುಕುವ ಪ್ರಾಣಿಯಾದನು**(ಆತ್ಮವಾದನು)**"

ಹೌದು! ಇಲ್ಲಿ ದೇವರು ಆತ್ಮವನ್ನು ಸೃಷ್ಟಿಸಿರುವ ರೀತಿಯ ಬಗ್ಗೆ ಸ್ಪಷ್ಟವಾಗಿ ಹೇಳಲಾಗಿದೆ.



ಶರೀರ ಮಾತ್ರ.....ಆತ್ಮವಾಗುವುದಿಲ್ಲ!

ಜೀವಶ್ವಾಸ ಅಥವಾ ಉಸಿರು ಮಾತ್ರ.....ಆತ್ಮವಾಗುವುದಿಲ್ಲ!

ಇವೆರಡೂ ಸೇರಿದಾಗ ಮಾತ್ರ ಬದುಕುವ ಆತ್ಮವಾಗುತ್ತದೆ!

ನೀರಿನಲ್ಲಿರುವ ಧಾತುಗಳನ್ನು ಉದಾಹರಣೆಯಾಗಿ ತೆಗೆದುಕೊಂಡರೆ ಈ ವಿಷಯವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬಹುದು.

ನಾವು ನೋಡುವುದೇನೆಂದರೆ

ಜಲಜನಕ + ಅಮ್ಲಜನಕ = ನೀರು

ಎರಡು ಪರಮಾಣು ಜಲಜನಕ ಮತ್ತು ಒಂದು ಪರಮಾಣು ಅಮ್ಲಜನಕ ಸೇರಿದಾಗ **ನೀರು** ಉಂಟಾಗುತ್ತದೆ. ಕೇವಲ ಜಲಜನಕ ಮಾತ್ರ ನೀರಾಗುವುದಿಲ್ಲ, ಮತ್ತು ಕೇವಲ ಆಮ್ಲಜನಕ ಮಾತ್ರ ನೀರಾಗುವುದಿಲ್ಲ!

ಮಾನವನ ಆತ್ಮವು ಅದೇ ರೀತಿ0ಯಾಗಿದೆ!

ಶರೀರ ಮಾತ್ರ ಆತ್ಮವಾಗುವುದಿಲ್ಲ ಮತ್ತು "ಉಸಿರು" (ಅಥವಾ ಜೀವಶ್ವಾಸ) ಮಾತ್ರ ಆತ್ಮವಾಗುವುದಿಲ್ಲ. ಶರೀರ ಮತ್ತು ಜೀವಶ್ವಾಸ ಅಥವಾ "ಉಸಿರು" ಎರಡೂ ಸೇರಿದರೆ ಮಾತ್ರ ಆತ್ಮ ಎಂದು ಕರೆ0ಯಲಾಗುತ್ತದೆ!

ಜೀವಶ್ವಾಸವು ಅಥವಾ ಉಸಿರು ಶರೀರವನ್ನು ಬಿಟ್ಟು ಹೊರಬರುವಾಗ ಆ ಶರೀರವು ಮತ್ತೆ ಜೀವವಿಲ್ಲದೆ ಮಣ್ಣಿಗೆ ಹಿಂದಿರುಗುತ್ತದೆ ಮತ್ತು ಆತ್ಮವು.....ಇನ್ನು ಇರುವುದಿಲ್ಲ

ಆದ್ದರಿಂದ ಆತ್ಮದ ಮರಣವನ್ನು ಕುರಿತು ಕೆಳಗಿನ ವಾಕ್ಯದಲ್ಲಿ ವರ್ಣಿಸಲಾಗಿದೆ

ಪ್ರಸಂಗಿ 12:7

"ಮಣ್ಣು ಭೂಮಿಗೆ ಸೇರಿ ಇದ್ದ ಹಾಗಾಗುವದು; ಆತ್ಮವು(ಉಸಿರು) ತನ್ನನ್ನು ದಯಪಾಲಿಸಿದ ದೇವರ ಬಳಿಗೆ ಸೇರುವದು"

(ಗಮನಿಸಿ : ಇಲ್ಲಿ ಕೊಟ್ಟಿರುವ ವಾಕ್ಯದಲ್ಲಿ "ಆತ್ಮ" ಎಂಬುದರ ಬದಲು "ಜೀವಶ್ವಾಸ" ಅಥವಾ "ಉಸಿರು" ಎಂದು ಬರಬೇಕಾಗಿತ್ತು ಆದರೆ ಭಾಷಾಂತರದಲ್ಲಿ ತಪ್ಪಾಗಿರುವುದರಿಂದ ಹೀಗೆ ಕೊಡಲಾಗಿದೆ)

ಹೌದು! ಇದು ಆತ್ಮದ ಮರಣವನ್ನು ಕುರಿತು ಮಾತನಾಡುತ್ತದೆ!

ಇಲ್ಲಿ ನಾವು ಗಮನಿಸಬೇಕಾದದ್ದೇನೆಂದರೆ ದೇವರು ಆದಾಮನನ್ನು ಸೃಷ್ಟಿಸಿದಾಗ ನೀಡಿದ ಜೀವಶ್ವಾಸವನ್ನು ಇಲ್ಲಿ "ಉಸಿರು" ಎನ್ನಲಾಗಿದೆ.

ಈ ಉಸಿರಿಗೆ ಏನಾಗುತ್ತದೆಂದು ನಾವು ಓದುತ್ತೇವೆ?

ಇದು ಹೇಳುವುದೇನೆಂದರೆ – **ಆತ್ಮವು (ಉಸಿರು) ತನ್ನನ್ನು ದಯಪಾಲಿಸಿ ದೇವರ ಬಳಿಗೆ ಸೇರುವದು**

"ಉಸಿರು" ಅಥವಾ "ಜೀವಶ್ವಾಸ"ಕ್ಕೆ ಕೈ ಕಾಲುಗಳು ಮತ್ತು ರೆಕ್ಕೆಗಳಿವೆಯೇ ದೇವರ ಬಳಿಗೆ ಹೋಗುವುದಕ್ಕೆ?

ಇದಕ್ಕೆ ಉತ್ತರ - ಇಲ್ಲ!!

ಹಾಗಾದರೆ ಈ ವಾಕ್ಯದ ಅರ್ಥವೇನು?

ಇದನ್ನು ಉದಾಹರಣೆಯೊಂದಿಗೆ ಅರ್ಥ ಮಾಡಿಕೊಳ್ಳೋಣ–

ಒಂದು ವೇಳೆ ಮನೆಯನ್ನು ಭೋಗ್ಯಕ್ಕೆ ತೆಗೆದುಕೊಂಡಿದ್ದರೆ ಮತ್ತು ಅದರ ಕಾಲಾವಕಾಶವು ಮುಗಿಯುವ ಸಮಯದಲ್ಲಿ ಹೀಗೆ ಹೇಳುವುದುಂಟು –

"ಇನ್ನು ಸ್ವಲ್ಪ ಸಮಯದಲ್ಲಿ ಈ ಭೋಗ್ಯದ ಮನೆಯು, ಮನೆಯ ಯಜಮಾನನಿಗೆ ಹಿಂದಿರುಗುತ್ತದೆ"!

ನಿಶ್ಚಯವಾಗಿಯೂ "ಮನೆ" ಯು ಹಿಂದಿರುಗಿ ಹೋಗುವುದಕ್ಕೆ ಕೈಕಾಲುಗಳಿಲ್ಲ!

ಇದರ ಅರ್ಥವೇನೆಂದರೆ ಮಾಲೀಕತ್ವದ ಅಧಿಕಾರವನ್ನು ಮತ್ತೆ ಯಜಮಾನನಿಗೆ ಹಿಂದಿರುಗಿಸಲಾಗುತ್ತದೆ!

ಅದೇ ರೀತಿ "ಉಸಿರು" ಅಥವಾ ಜೀವಶ್ವಾಸವಾಗಿದೆ!

ಜೀವಿಸುವ ಅಧಿಕಾರವು ಅದನ್ನು ಕೊಟ್ಟಂತಹ **ದೇವರಿಗೆ ಹಿಂದಿರುಗುತ್ತದೆ!**

"ಉಸಿರೇ" ಜೀವಶ್ವಾಸವೆಂಬುದರ ನಿಜಾಂಶವನ್ನು ಕೆಳಗಿನ ವಾಕ್ಯದಲ್ಲಿ ದೃಢಪಡಿಸಲಾಗಿದೆ –

ಯೋಬನು 27:3

"ನನ್ನಲ್ಲಿ ಜೀವವು (ಉಸಿರು) ಇನ್ನೂ ಪೂರ್ಣವಾಗಿದೆ, ದೇವರು ಊದಿದ ಶ್ವಾಸವು ನನ್ನ ಮೂಗಿನಲ್ಲಿ ಇನ್ನೂ ಆಡುತ್ತಿದೆ"!

ಎಷ್ಟು ಸ್ಪಷ್ಟವಾಗಿ ಕೊಡಲಾಗಿದೆ!

ಬೇರೆ ಭಾಷೆಯಲ್ಲಿ ಆತ್ಮ ಎಂಬುದಕ್ಕೆ

ನೆಫೆಶ್ NEPHESH (ಇಬ್ರಿಯ)	ಸೂಕಿ PSUCHE (ಗ್ರೀಕ್)
H-7307.	G-4151

ಬೇರೆ ಭಾಷೆಯಲ್ಲಿ ಉಸಿರು ಎಂಬುದಕ್ಕೆ

ರೂವಾಕ್ RUWACH (ಇಬ್ರಿಯ)	ನ್ಯೂಮಾ PNEUMA (ಗ್ರೀಕ್)
H-5315	G-5590

ಶರೀರ ಮತ್ತು ಜೀವಶ್ವಾಸವಿರುವ ಎಲ್ಲಾ ಜೀವರಾಶಿಗಳು.....ಆತ್ಮವೇ

ಮೀನು, ಪಕ್ಷಿಗಳು, ಪ್ರಾಣಿಗಳು, ಕ್ರಿಮಿಕೀಟಗಳು ಇತರೆ.....

ಆದ್ದರಿಂದ ನಾವು ಹೀಗೆ ಓದುತ್ತೇವೆ

ಪ್ರಸಂಗಿ 3:18-21

" ಮತ್ತೆ ಮನಸ್ಸಿನಲ್ಲಿ ಹೀಗೆ ಯೋಚಿಸಿದೆನು - ದೇವರು ಮನುಷ್ಯರನ್ನು ಪರೀಕ್ಷಿಸುವದಕ್ಕೂ ಮನುಷ್ಯರು ಪಶುಪ್ರಾಯರಾಗಿದ್ದೇವೆಂದು ತಾವೇ ಗ್ರಹಿಸಿಕೊಳ್ಳುವದಕ್ಕೂ ಆಸ್ಪದವಾಗುವಂತೆ ಇದು ನರಜನ್ಮದವರ ನಿಮಿತ್ತವಾಗಿ ಆಯಿತಲ್ಲವೆ. ಮನುಷ್ಯನ ಗತಿಯೂ ಪಶುವಿನ ಗತಿಯೂ ಒಂದೇ; ಪಶುವಿಗೆ ಸಾವು ಬರುವ ಹಾಗೆ ಮನುಷ್ಯನಿಗೂ ಬರುವದು; ಎಲ್ಲಕ್ಕೂ ಪ್ರಾಣ ಒಂದೇ; ಮನುಷ್ಯನು ಪಶುವಿಗಿಂತ ಶ್ರೇಷ್ಠನಲ್ಲ;

ಎಲ್ಲಾ ಬರೀಗಾಳಿಯೇ. ಎಲ್ಲಾ ಪ್ರಾಣಿಗಳು ಒಂದೇ ಸ್ಥಳಕ್ಕೆ ಹೋಗುವವು;

ಎಲ್ಲಾ ಮಣ್ಣಿನಿಂದಾದವು, ಎಲ್ಲಾ ಮಣ್ಣಿಗೆ ಪುನಃ ಸೇರುವವು. "

ಮನುಷ್ಯರು ಮತ್ತು ಪಶುಗಳು ಇವೆರಡಕ್ಕೂ ಇರುವ "ಉಸಿರು" ಅಥವಾ ಜೀವಶ್ವಾಸದಲ್ಲಿ 0ಯಾವ ವ್ಯತ್ಯಾಸವೂ ಇಲ್ಲ.

ಇವೆರಡಕ್ಕೂ ಇರುವ ವ್ಯತ್ಯಾಸವೆಂದರೆ ಮನುಷ್ಯನಿಗೆ ಬುದ್ಧಿ ಶಕ್ತಿ0ಯ ಸಾಮರ್ಥ್ಯವು ಅಧಿಕವಾಗಿ ಕೊಡಲ್ಪಟ್ಟಿದೆ.

ಎರಡಕ್ಕೂ ಇರುವ ಉಸಿರು ಒಂದೇ!

ನೀವು ಹೇಗೆಂದು ಕೇಳಬಹುದು?

ಒಂದು ಉದಾಹರಣೆಯನ್ನು ತೆಗೆದುಕೊಳ್ಳೋಣ ಒಂದು ವೇಳೆ ವಿವಿಧ ಬಣ್ಣದ ಮತ್ತು ಮಾದರಿಗಳ 10 ದೂರದರ್ಶನಗಳನ್ನು **(T.V)** ತೆಗೆದುಕೊಂಡೆವೆಂದು ಅಂದುಕೊಳ್ಳೋಣ.

ಹೊರಗಡೆ ನೋಡಿದರೆ ಅವೆಲ್ಲವೂ ವ್ಯತ್ಯಾಸವಾಗಿ ಕಾಣುತ್ತದೆ ಆದರೆ ಒಳಗೆ ಇರುವ ನಾಳ **(Tube),** ವಿದ್ಯುತ್ ವಾಹಕ **(Electrode),** ತಂತಿಗಳು **(Wiring)** ಇತರೆಗಳೆಲ್ಲವೂ ಒಂದೇ ರೀತಿಯಾಗಿರುತ್ತದೆ.

ಇದಲ್ಲದೆ, ಅವುಗಳಲ್ಲಿ ಇನ್ನೊಂದು ವಿಷಯ ಒಂದೇ ರೀತಿಯಾಗಿರುತ್ತದೆ!

ಇವೆಲ್ಲವೂ ವಿದ್ಯುತ್ ಶಕ್ತಿಯಿಂದ ಶಕ್ತಿಯ ಸಹಾಯದಿಂದ ಕಾರ್ಯ ನಿರ್ವಹಿಸುತ್ತದೆ

ವಿದ್ಯುತ್ ಶಕ್ತಿಯನ್ನು ನಂದಿಸಿದಾಗ ಅಥವಾ ಹಿಂತೆಗೆದಾಗ ಎಲ್ಲಾ ವಿಧವಾದ ದೂರದರ್ಶನ ಪೆಟ್ಟಿಗೆಗಳು "ಸಾಯುತ್ತದೆ" ಅಥವಾ ಕೆಲಸ ಮಾಡುವುದನ್ನು ನಿಲ್ಲಿಸುತ್ತದೆ!

ಯಾರಾದರೂ ದೂರದರ್ಶನ ಪೆಟ್ಟಿಗೆಯಲ್ಲಿ (T.V.) ಹರಿದ ವಿದ್ಯುತ್ ಶಕ್ತಿಯನ್ನು ಬೇರ್ಪಡಿಸಿ, ಈ ವಿದ್ಯುತ್ಶಕ್ತಿಯು ಈ ದೂರದರ್ಶನ ಪೆಟ್ಟಿಗೆಗೆ ಸೇರಿದ್ದು ಅಥವಾ ಆ ದೂರದರ್ಶನದ ಪೆಟ್ಟಿಗೆಗೆ ಸೇರಿದ್ದು ಎಂದು ಹೇಳಲು ಸಾಧ್ಯವೇ?

ಖಂಡಿತವಾಗಿಯೂ ಇಲ್ಲ!

ಏಕೆಂದರೆ ಎಲ್ಲಾ ದೂರದರ್ಶನ ಪೆಟ್ಟಿಗೆಗೆ ಹರಿಯುವ ವಿದ್ಯುತ್ **ಶಕ್ತಿಯು ಒಂದೇ** ಆಗಿರುತ್ತದೆ!

ಇದೇ ನಿಯಮವು ಮನುಷ್ಯನ ಮತ್ತು ಪಶುಗಳ ಆತ್ಮಕ್ಕೆ ಅನ್ವಯಿಸುತ್ತದೆ!

ಉಸಿರಿಗೆ ವಿವಿಧ ವ್ಯಕ್ತಿತ್ವವಿರುವುದಿಲ್ಲ ಹಾಗು ವಿವಿಧ ಅಸ್ತಿತ್ವವಿರುವುದಿಲ್ಲ ಏಕೆಂದರೆ ಉಸಿರು ಕೇವಲ ಶರೀರಕ್ಕೆ ಜೀವವನ್ನು ಕೊಟ್ಟು ಅದನ್ನು ನಿರ್ವಹಿಸುವ ಶಕ್ತಿಯಾಗಿದೆ.

ಜೀವಶ್ವಾಸವಾದ "ಉಸಿರನ್ನು" ಕುರಿತ ಸತ್ಯವನ್ನು ಅಭ್ಯಾಸ ಮಾಡಿದ ನಂತರ ಈಗ ಆತ್ಮದ ಎರಡನೆಯ ಭಾಗವಾದ ಶರೀರವನ್ನು ಕುರಿತು ಅಭ್ಯಾಸ ಮಾಡೋಣ!

ಕೆಳಗಿನ ವಾಕ್ಯವನ್ನು ಓದೋಣ –

ಕೀರ್ತನೆ 139:14

"ನೀನು ನನ್ನನ್ನು ಅದ್ಭುತವಾಗಿಯೂ ವಿಚಿತ್ರವಾಗಿಯೂ ರಚಿಸಿದ್ದರಿಂದ ನಿನ್ನನ್ನು ಕೊಂಡಾಡುತ್ತೇನೆ. ನಿನ್ನ ಕೃತ್ಯಗಳು ಆಶ್ಚರ್ಯವಾಗಿವೆಯೆಂದು ನನ್ನ ಹೃದಯವು ಚೆನ್ನಾಗಿ ಗ್ರಹಿಸಿಕೊಂಡಿದೆ."

ಹೌದು! ಮನುಷ್ಯನ ರಚನೆಯು **"ಅದ್ಭುತವಾಗಿಯೂ ವಿಚಿತ್ರವಾಗಿಯೂ"** ಇದೆ.

ಮೂಳೆ, ಸ್ನಾಯು, ಅಂಗಾಂಶ, ರಕ್ತನಾಳಗಳು, ನರಗಳು ಮತ್ತು ಅಂಗಗಳು ಎಷ್ಟು ವ್ಯವಸ್ಥಿತವಾಗಿವೆ!!

ಎಲ್ಲವೂ ಪರಿಪೂರ್ಣ ಐಕ್ಯತೆಯಿಂದ ಕೆಲಸ ಮಾಡುತ್ತದೆ!

ದೇವರು ಆದಾಮನನ್ನು ಹೇಗೆ ಸೃಷ್ಟಿಸಿರಬಹುದೆಂದು ನೀವು ಎಂದಾದರೂ ಯೋಚಿಸಿರುವಿರಾ?

ದೇವರು ಅವನನ್ನು ಹೇಗೆ ಸೃಷ್ಟಿಸಿದನು?

ಮಣ್ಣಿನಿಂದ ಬೊಂಬೆ0ಯನ್ನು ಮಾಡಿ. ನಂತರ ಆತನ ಜೀವಶ್ವಾಸವನ್ನು ಆ ಬೊಂಬೆ0ಯಲ್ಲಿ ಊದಿ,
ಜಾದೂ ಮಾಡಿ ಮನುಷ್ಯನನ್ನು ದೇವರು ಉಂಟು ಮಾಡಿದನೇ?

ಕೆಲವರು ಹೀಗೆ0ಯೇ ಅಂದುಕೊಳ್ಳುತ್ತಾರೆ!

ಆದರೆ ಸತ್ಯವೇದವು **ಬೇರೆ ರೀತಿ ಬೋಧಿಸುತ್ತದೆ!**

ಕೆಳಗಿನ ವಾಕ್ಯವು ಹೇಗೆ ದೇವರು ಆದಾಮನನ್ನು ಮತ್ತು ಆತನ ಶರೀರವನ್ನು ಉಂಟು ಮಾಡಿದನೆಂದು ಹೇಳುತ್ತದೆ!

ಯೋಬನು 10:10

"ನೀನು ನನ್ನನ್ನು ಹಾಲಿನಂತೆ ಹೊಯ್ದು ಮೊಸರಿನ ಹಾಗೆ ಹೆಪ್ಪುಗಟ್ಟಿಸಿದಿಯಲ್ಲಾ."

ಈ ವಾಕ್ಯದ ಅರ್ಥವೇನು?

ಇದು ದೇವರು **ಮೊದಲು** ಅಚ್ಚನ್ನು ಸಿದ್ಧಮಾಡಿ ದ್ರವದ ಸುಣ್ಣವನ್ನು ಅಚ್ಚಿನಲ್ಲಿ ಸುರಿದು ಮೂಳೆ0ಯನ್ನು ಉಂಟುಮಾಡಿದನು ಮತ್ತು ಬೇಕಾದ ಆಕಾರ ಮಾಡಿದನು!

ಈಗಿನ ಕಾಲದಲ್ಲಿ ಹೇಗೆ ಮನೆ0ಯನ್ನು ಕಟ್ಟುವಾಗ ಮೊದಲು ಸ್ತಂಭಗಳನ್ನು (ಪಿಲ್ಲರ್ಸ್) ನಿಲ್ಲಿಸಿ ನಂತರ ಗೋಡೆಗಳನ್ನು ಕಟ್ಟುತ್ತಾರೋ ಹಾಗೆ0ಯೇ, ಮನುಷ್ಯನನ್ನು ಉಂಟುಮಾಡುವಾಗ ಮೊದಲು **ಮೂಳೆಗಳನ್ನು** ಉಂಟುಮಾಡಿರಬೇಕು.

19

ನಂತರ ದೇವರು ಏನು ಮಾಡಿದರು?

ಕೆಳಗಿನ ವಾಕ್ಯದಲ್ಲಿ ಹೀಗೆ ಓದುತ್ತೇವೆ –

ಯೋಬನು 10:11

“ನನ್ನನ್ನು ಎಲುಬು ನರಗಳಿಂದ ಹೆಣೆದು ಮಾಂಸಚರ್ಮಗಳಿಂದ ಹೊದಿಸಿದಿ.”

ಹೌದು! ಮೂಳೆಗಳನ್ನು ಉಂಟು ಮಾಡಿದ ನಂತರ ಚಲನೆಗೆ ಸಹಾಯವಾಗುವಂತೆ ಮೂಳೆಗಳ ಮೇಲೆ ಸ್ನಾಯುಗಳನ್ನು ಜೋಡಿಸಲಾಯಿತು, ಅವುಗಳನ್ನು ಅಪಧಮನಿಗಳು ಮತ್ತು ರಕ್ತನಾಳಗಳೊಂದಿಗೆ ಸಂಪರ್ಕ ಮಾಡಲಾಯಿತು, ಅದು ಒಳಗೆ ಮತ್ತು ಹೊರಗೆ ಹರಿಯುವ ರಕ್ತದ ಮೂಲಕ ಜೀವವನ್ನು ಸಾಗಿಸುತ್ತದೆ.

ಇದೆಲ್ಲವನ್ನೂ ನಂತರ ಮಾಂಸ ಮತ್ತು ಚರ್ಮದಿಂದ "ಹೊದಿಸಲಾಯಿತು" ಅಥವಾ ಮುಚ್ಚಲಾಯಿತು!!

ಮತ್ತು ಇದು ಮನುಷ್ಯನ ಸೃಷ್ಟಿಯ "ಹೊರಗಿನ" ಕಥೆ!!

ನಾವು ಇನ್ನೂ ವಿವಿಧ ಅಂಗಗಳ **“ಒಳಗಿನ”** ಕಥೆಯನ್ನು ನೋಡಿಲ್ಲ –

ಶ್ವಾಸಕೋಶ, ಹೊಟ್ಟೆ, ಪಿತ್ತ ಜನಕಾಂಗ, ಕರುಳು, ಕಿವಿಗಳು, ಮೂಗು ಮೂತ್ರ ಜನಕಾಂಗ, ಹೃದಯ ಇತರೆ.

ಹಾಗೆ ನೋಡುತ್ತಾ ಹೋದರೆ ಇದು **ಜೀವಶಾಸ್ತ್ರದ ತರಗತಿಯಾಗಿ** ಬಿಡುತ್ತದೆ!

ಈಗ ಮಾನವ ಶರೀರದ ಕೆಲವು ಅಂಕಿಅಂಶಗಳನ್ನು ನೋಡೋಣ–



ಶರೀರದಲ್ಲಿ ಒಟ್ಟು 206 ಮೂಳೆಗಳಿವೆ.

ಅತಿ ದೊಡ್ಡದಾದ ಎಲುಬು **ಫೆಮುರ್** (ತೊಡೆಯ ಮೂಳೆ)

ಮತ್ತು ಅತಿ ಚಿಕ್ಕದಾದ ಮೂಳೆ ಕಿವಿಯ ತಮಟೆಯ (ಕೋಕ್ಲಿಕ್ಸ್) ಮೂಳೆ.

ಸ್ಟಿರಪ್ ಮೂಳೆ ಕೇವಲ 3 ಮಿ.ಮೀ(0.13ಇಂಚು) ಉದ್ದ.

ಇಡೀ ಶರೀರದಲ್ಲಿ ಒಟ್ಟು 20 ಚದುರ ಅಡಿ ಚರ್ಮವಿದೆ!

ಶರೀರದಲ್ಲಿ ಒಟ್ಟು 50 **ಲಕ್ಷ ಕೂದಲುಗಳಿವೆ** ಮತ್ತು ಪ್ರತಿಕೂದಲು 3 ವರ್ಷಗಳ ಕಾಲ ಬಾಳಿಕೆ ಬರುತ್ತದೆ.

ಶರೀರದಲ್ಲಿ ಒಟ್ಟು 650 ಸ್ನಾಯುಗಳಿವೆ



ಶರೀರದಲ್ಲಿ ಸುಮಾರು 100 ಕೀಲುಗಳಿಗೆ.

ಶರೀರದಲ್ಲಿ ಒಟ್ಟು 60,000 ಮೈಲಿ ರಕ್ತನಾಳಗಳು,ಅಪಧಮನಿಗಳು ಮತ್ತು ಸೂಕ್ಷ್ಮ ರಕ್ತವಾಹಿನಿಗಳಿವೆ.



ಶರೀರದಲ್ಲಿ ಒಟ್ಟು 3000 ಕೋಟಿ ನರ ಕೋಶಗಳಿವೆ.

ನಾಲಿಗೆಯಲ್ಲಿ 9,000 ರಸಾಂಕುರಗಳಿವೆ, ಅದು ಅನೇಕ ವೈವಿಧ್ಯಮಯ ರುಚಿಯನ್ನು ಉಂಟುಮಾಡುತ್ತದೆ, ಇದು ಅದರ ಸಂಶೋಧನೆಗೆ ಮೀಸಲಾಗಿರುವ ವಿಜ್ಞಾನದ ಶಾಕೆಗೆ ಎಡೆಮಾಡಿಕೊಟ್ಟಿದೆ ಅದುವೇ-- ಪಾಕಶಾಲೆಯ ವಿಜ್ಞಾನ ಮತ್ತು ಪಾಕವಿಧಾನ!!





ಸ್ಪರ್ಶ ಮತ್ತು ಶಾಖ ಮತ್ತು ಶೀತದ ವಿವಿಧ ವ್ಯತ್ಯಾಸಗಳನ್ನು ಅನುಭವಿಸಲು ಚರ್ಮದಲ್ಲಿ 4 ಮಿಲಿಯನ್ (40 ಲಕ್ಷಗಳು) ಗ್ರಾಹಕಗಳು ಇವೆ.

ನಂತರ ನಾವು ಶರೀರವನ್ನು ಹತೋಟಿ0ಯಲ್ಲಿಡುವಂತ ಕೇಂದ್ರ ಕಾ0ರ್ಯ ಸ್ಥಾನವನ್ನು ಕುರಿತು ನೋಡೋಣ ಅಂದರೆ – ಮಿದುಳು!

ಮಿದುಳಿನಲ್ಲಿರುವ ಸಂಕೇತಗಳು
ದೊಡ್ಡ ದೂರವಾಣಿ
ವಿನಿಮ0ಯದಂತಿದೆ

–ಬೂದು ಮತ್ತು ಬಿಳಿ ದ್ರವ್ಯಗಳಿಂದ
ಕೂಡಿದ ಅತ್ಯಂತ ಸಂಕೀರ್ಣ
ಕಂಪ್ಯೂಟರ್‌ನಂತೆ ಇದೆ.

ಒಂದು ಸೆಕೆಂಡಿನಲ್ಲಿ ಮೆದುಳು ಸ್ವೀಕರಿಸುವ ಮತ್ತು ಕಾರ್ಯನಿರ್ವಹಿಸುವ ಸಂದೇಶಗಳ ಸಂಖ್ಯೆಯನ್ನು ಗಮನಿಸಿದರೆ ಮನಸ್ಸು ದಿಗಿಲುಗೊಳ್ಳುತ್ತದೆ ! ಸ್ವಲ್ಪ 0ಯೋಚಿಸಿ ನೋಡಿರಿ!

ಆದ್ದರಿಂದ ನಿಜವಾಗಿ0ಯೂ ಕೆಳಗಿನ ವಾಕ್ಯವನ್ನು ಅರ್ಥಮಾಡಿಕೊಳ್ಳಬಹುದು –

ನೀನು ನನ್ನನ್ನು ಅದ್ಭುತವಾಗಿಯೂ ವಿಚಿತ್ರವಾಗಿಯೂ ರಚಿಸಿದ್ದರಿಂದ....

ಮತ್ತು ಕೆಳಗಿನ ವಾಕ್ಯವನ್ನು ನಾವು ಒಪ್ಪಿಕೊಳ್ಳುತ್ತೇವೆ –

...ನಿನ್ನ ಕೃತ್ಯಗಳು ಆಶ್ಚರ್ಯವಾಗಿದೆಯೆಂದು ನನ್ನ ಹೃದಯವು (ಆತ್ಮವು) ಚೆನ್ನಾಗಿ ಗ್ರಹಿಸಿಕೊಂಡಿದೆ.

ಆತ್ಮದ ಬಗ್ಗೆ ನಾವು ತಿಳಿದುಕೊಂಡ ನಂತರ –

ಆತ್ಮವು ಸಾ0ಯುವುದಿಲ್ಲ ಎಂಬ 0ಯೋಚನೆ ಎಲ್ಲಿಂದ ಬಂದಿತು?

ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ನೋಡೋಣ –

ಆದಿಕಾಂಡ 3:4

" ಆಗ ಸರ್ಪವು ಸ್ತ್ರೀಗೆ - ನೀವು ಹೇಗೂ ಸಾಯುವದಿಲ್ಲ; "

ಹೌದು! ಸುಳ್ಳಿಗೆ ಮೂಲ ಪುರುಷನೂ ಆದ ಸೈತಾನನ ಈ ಮೊದಲ ಸುಳ್ಳನ್ನು ದೇವರ ಸತ್ಯಕ್ಕೆ ವಿರೋಧವಾಗಿ ಆಡಿದನು.

ಆದಿಕಾಂಡ 2:16,17

"ಇದಲ್ಲದೆ ಯೆಹೋವ (ಕರ್ತನಾದ) ದೇವರು ಆ ಮನುಷ್ಯನಿಗೆ (ಆತ್ಮನಿಗೆ) - ನೀನು(ಆತ್ಮನು) ತೋಟದಲ್ಲಿರುವ ಎಲ್ಲಾ ಮರಗಳ ಹಣ್ಣುಗಳನ್ನು ಯಥೇಚ್ಛವಾಗಿ ತಿನ್ನಬಹುದು; ಒಳ್ಳೇಯದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ಮಾತ್ರ ತಿನ್ನಬಾರದು; ತಿಂದ ದಿನ ಸತ್ತೇ ಹೋಗುವಿ ಎಂದು ವಿಧಿಸಿದನು."

ಹೌದು! ಆದಾಮನು ಒಂದು ಆತ್ಮನು!

ಮತ್ತು ದೇವರು ಆತ್ಮನಾದ ಆದಾಮನಿಗೆ ಮರಣದ ಆಪತ್ತನ್ನು ಕುರಿತು ಎಚ್ಚರಿಸುತ್ತಾನೆ.

ದೇವರು ಹೀಗೆ ಹೇಳುವಾಗ **"ನೀನು.....ತಿಂದ ದಿನ ಸತ್ತೇ ಹೋಗುವಿ...."**

ಇಲ್ಲಿ **"ನೀನು"** ಎಂಬುದು ಆತ್ಮನಾದ ಆದಾಮ ನನ್ನು ಸೂಚಿಸುತ್ತದೆ!

ಮತ್ತು ಆತ್ಮನಾದ ಆದಾಮನಿಗೆ ದೇವರ ಸರಳವಾದ ಹೇಳಿಕೆ ಏನೆಂದರೆ ಆತನು ಅವಿಧೇಯನಾದರೆ ಆತನು ಅಂದರೆ ಆತ್ಮನು ಸಾಯುತ್ತಾನೆ!!

ಏದೆನ್ ತೋಟದಲ್ಲಿ ದೇವರು ಕೊಟ್ಟ ಸಾಕ್ಷಿ ಇದುವೆ!!!
ಈ ದಿನ 99.9% ಜನರು ಸೈತಾನನ ಮಾತನ್ನು ನಂಬುತ್ತಾರೆ ಆದರೆ ದೇವರ ಸಾಕ್ಷಿಯನ್ನು (ಮಾತನ್ನು) ನಂಬುವುದಿಲ್ಲ.

ಹೀಗೇಕೆ?

ಏಕೆಂದರೆ ಕೆಳಗಿನ ವಾಕ್ಯದಲ್ಲಿ ಓದುತ್ತೇವೆ....

ಯೆಶಾಯ 5:20

"ಕೆಟ್ಟದ್ದನ್ನು ಒಳ್ಳೇದೆಂದೂ ಒಳ್ಳೇದನ್ನು ಕೆಟ್ಟದ್ದೆಂದೂ ಬೋಧಿಸಿ ಕತ್ತಲನ್ನು ಬೆಳಕೆಂದೂ ಬೆಳಕನ್ನು ಕತ್ತಲೆಂದೂ ಸಾಧಿಸಿ ಕಹಿಯು ಸಿಹಿ, ಸಿಹಿಯು ಕಹಿ ಎಂದು ಸ್ಥಾಪಿಸುವವರ ಗತಿಯನ್ನು ಏನೆಂದು ಹೇಳಲಿ."

ಹೌದು! ಸೈತಾನನು **"ಬೆಳಕನ್ನು"** (**ಸತ್ಯವನ್ನು**) ಕತ್ತಲೆಯನ್ನಾಗಿಯೂ ಮತ್ತು **"ಕತ್ತಲೆ"** (**ಸುಳ್ಳು ಬೋಧನೆ**)ಯನ್ನು ಬೆಳಕಾಗಿಯೂ ಮಾಡಿದ್ದಾನೆ ಏಕೆಂದರೆ ಅವನು **"ಸುಳ್ಳಿಗೆ ಮೂಲ ಪುರುಷನೂ"** ಆಗಿದ್ದಾನೆಂದು ಓದುತ್ತೇವೆ (**ಯೋಹಾನ 8:44**)

ಆದ್ದರಿಂದ ಈ ಲೋಕವು ಸಂಪೂರ್ಣವಾಗಿ "ಕತ್ತಲಿನಿಂದ" ಅಥವಾ ಅಸತ್ಯದಿಂದ ತುಂಬಿದೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.

ಯೆಶಾಯ 60:2 –"ಇಗೋ, ಕತ್ತಲು ಭೂಮಿಯನ್ನು ಆವರಿಸಿದೆ, ಕಾರ್ಗತ್ತಲು ಜನಾಂಗಗಳನ್ನು ಮುಚ್ಚಿದೆ; ನಿನ್ನ ಮೇಲಾದರೋ ಯೆಹೋವನು ಉದಯಿಸುವನು, ಆತನ ತೇಜಸ್ಸು ನಿನ್ನಲ್ಲಿ ಕಾಣಿಸುವದು."

ಆದರೆ ಸೈತಾನನ ಈ ಸುಳ್ಳನ್ನು ಲೋಕದವರು ಸುಲಭವಾಗಿ ಅಂಗೀಕರಿಸುತ್ತಾರೆ ಇದಕ್ಕೆ ಕಾರಣವನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ

ಪ್ರಸಂಗಿ 3:11

"ಒಂದೊಂದು ವಸ್ತುವನ್ನು ಸಮಯಕ್ಕೆ ತಕ್ಕ ಹಾಗೆ ಅಂದವಾಗಿ ನಿರ್ಮಿಸಿದ್ದಾನೆ; ಇದಲ್ಲದೆ ಮನುಷ್ಯರ ಹೃದಯದಲ್ಲಿ ಅನಂತಕಾಲದ ಯೋಚನೆಯನ್ನು ಇಟ್ಟಿದ್ದಾನೆ; ಆದರೂ ದೇವರು ಆದ್ಯಂತವಾಗಿ ನಡಿಸುತ್ತಿರುವ ಕೆಲಸವನ್ನು ಅವರು ಗ್ರಹಿಸಲಾರದಂತೆ ಮಾಡಿದ್ದಾನೆ." [ಎನ್.ಐ.ವಿ 0ಯಲ್ಲಿ ಮಾತ್ರ ಓದಿರಿ]

ಕೆ.ಜೆ.ವಿ ಮತ್ತು ಇತರ ಭಾಷಾಂತರದಲ್ಲಿ –

...ಲೋಕವನ್ನು ಅವರ ಹೃದಯದಲ್ಲಿ ಇಟ್ಟಿದ್ದಾನೆ.....ಎಂದು ಕೊಟ್ಟಿದೆ.

ಆದರೆ ಎನ್.ಐ.ವಿ 0ಯ ಭಾಷಾಂತರದಲ್ಲಿ ಬಹಳ ಸ್ಪಷ್ಟವಾಗಿ ಈ ಇಬ್ರಿ0ಯ ಪದವನ್ನು ಕೊಟ್ಟಿದ್ದಾರೆ – **"ಅನಂತಕಾಲದ ಯೋಚನೆ" (Eternity)**

ಹೌದು! ದೇವರು ಸ್ವತಃ "ಅನಂತಕಾಲದ ಯೋಚನೆ" ಯನ್ನು (ಭವಿಷ್ಯವನ್ನು ಕುರಿತು ನಿಜವಾದ ನಿರೀಕ್ಷೆ0ಯನ್ನು) ಮನುಷ್ಯರ ಹೃದ0ಯದಲ್ಲಿ ಇಟ್ಟಿದ್ದಾರೆ ಮತ್ತು ದೇವರ 0ಯೋಜನೆ0ಯ ಪ್ರಕಾರ ಪುನರುತ್ಥನದ ನಂತರ ದೇವರ ರಾಜ್ಯವು, ಭವಿಷ್ಯದಲ್ಲಿ ಈ ಭೂಮಿ0ಯಲ್ಲಿ0ಯೇ ಸ್ಥಾಪಿಸಲ್ಪಡುವದು **(ಮತ್ತಾ0ಯ 6:10).**

ಆದರೆ ಸೈತಾನನ ಈ ನಿರೀಕ್ಷೆ0ಯು ಭೂಮಿ0ಯಲ್ಲಿಲ್ಲ, ಅದು ಪರಲೋಕ ಅಥವಾ ನರಕದಲ್ಲಿದೆ ಎಂದು **ಸುಳ್ಳು ಹೇಳಿ ದಾರಿ ತಪ್ಪಿಸುತ್ತಿದ್ದಾನೆ.**

ಈ ವಾಕ್ಯದ ಮುಂದುವರಿಕೆ0ಯನ್ನು ಕೆಳಗೆ ನೋಡುತ್ತೇವೆ –

ಪ್ರಸಂಗಿ 3:11 – "..... ಆದರೂ ದೇವರು ಆದ್ಯಂತವಾಗಿ ನಡಿಸುತ್ತಿರುವ ಕೆಲಸವನ್ನು ಅವರು ಗ್ರಹಿಸಲಾರದಂತೆ ಮಾಡಿದ್ದಾನೆ."

ಹೌದು! ಎಲ್ಲಾ ಮನುಷ್ಯ ಜಾತಿಯು ಸತ್ಯವೇದದ ವಾಕ್ಯದಿಂದ ದೇವರ ದೈವೀಕ ಯೋಜನೆಯನ್ನು ಅರ್ಥಮಾಡಿಕೊಳ್ಳಲು ಆಗದೆ ಇರುವುದರಿಂದ ಸೈತಾನನು ಸತ್ಯವನ್ನು ಸುಲಭವಾಗಿ ವಿರೂಪಗೊಳಿಸಲು ಸಾಧ್ಯವಾಗುತ್ತಿದೆ ಮತ್ತು –

"……ಕತ್ತಲೆಯನ್ನು ಬೆಳಕನ್ನಾಗಿ ಮತ್ತು ಬೆಳಕನ್ನು ಕತ್ತಲೆಯನ್ನಾಗಿ ಮಾಡಿದ್ದಾನೆ."

ಆದ್ದರಿಂದ ಮರಣದಲ್ಲಿ ಆತ್ಮದ **ನಿಜವಾದ ಸ್ಥಿತಿಯೇನು**?

ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

ಪ್ರಸಂಗಿ 9:4

"ಜೀವಿತರ ಗುಂಪಿನಲ್ಲಿ ಸೇರಿದವನಿಗೆ ನಿರೀಕ್ಷೆಯುಂಟು; ಸತ್ತ ಸಿಂಹಕ್ಕಿಂತ ಬದುಕಿರುವ ನಾಯಿಯೇ ಲೇಸು."

ಇದು ಹೇಳುವುದೇನೆಂದರೆ ಮರಣದ ನಂತರ ನಿರ್ಜೀವತೆಯ ಸ್ಥಿತಿಯಲ್ಲಿರುತ್ತೇವೆ. ಆದ್ದರಿಂದ ಮಹಿಮೆ ಮತ್ತು ಶಕ್ತಿ ತುಂಬಿರುವ ಸಿಂಹವನ್ನು ನಾಯಿಗೆ **ಎಂದಿಗೂ** ಹೋಲಿಸಲಾಗುವುದಿಲ್ಲ, ಆದರೆ ಸಿಂಹವು ಸತ್ತಾಗ ಬದುಕಿರುವ ನಾಯಿ ಅದಕ್ಕಿಂತಲೂ ಮೇಲಾಗಿದೆ, **ಮರಣದಲ್ಲಿ ಏನೂ ಇರುವುದಿಲ್ಲ,** ಏಕೆಂದರೆ ಜೀವದಲ್ಲಿ ಶಕ್ತಿ ಮತ್ತು ಮಹಿಮೆಯಿದೆ ಆದರೆ ಮರಣದಲ್ಲಿ ಏನೂ ಇರುವುದಿಲ್ಲ, ಮರಣ ಎಂಬುದು

ಸಂಪೂರ್ಣ ನಿರ್ಜೀವ ಸ್ಥಿತಿಯಾಗಿರುತ್ತದೆ !!

ಇದನ್ನು ಕೆಳಗಿನ ವಾಕ್ಯದಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ....

ಪ್ರಸಂಗಿ 9:5,6

"ಜೀವಿತರಿಗೆ ಸಾಯುತ್ತೇವೆಂಬ
ತಿಳುವಳಿಕೆಯು ಉಂಟಷ್ಟೆ;
ಸತ್ತವರಿಗೋ ಯಾವ
ತಿಳುವಳಿಕೆಯೂ ಇಲ್ಲ; ಅವರಿಗೆ ಇನ್ನು
ಮೇಲೆ ಪ್ರತಿಫಲವೇನೂ ಇಲ್ಲ, ಅವರ
ಜ್ಞಾಪಕವೇ ಹೋಯಿತಲ್ಲವೆ. ಅವರು
ಸತ್ತಾಗಲೇ ಅವರ ಪ್ರೀತಿಯೂ
ಹಗೆಯೂ ಹೊಟ್ಟೇಕಿಚ್ಚೂ ಅಳಿದು
ಹೋದವು; ಲೋಕದೊಳಗೆ ನಡೆಯುವ
ಯಾವ ಕೆಲಸದಲ್ಲಿಯೂ ಅವರಿಗೆ
ಇನ್ನೆಂದಿಗೂ ಪಾಲೇ ಇಲ್ಲ."

ಹೌದು! ಸತ್ತವರು ಏನೂ ಅರಿತುಕೊಳ್ಳುವುದಿಲ್ಲ ಮತ್ತು ಏನನ್ನು ಮಾಡಲಾಗುವುದಿಲ್ಲ!

"ಸತ್ತ ನಂತರ ಜೀವಿಸುವುದು" ಮತ್ತು "ಸತ್ತ ನಂತರ" ಸೇದು ತೀರಿಸಿಕೊಳ್ಳುವದು ಎಂಬುದಕ್ಕೆ ಸತ್ಯವೇದದಲ್ಲಿ ಯಾವ ಆಧಾರವೂ ಇಲ್ಲ ಮತ್ತು ಇವೆಲ್ಲಾ ಬರೀ ಕಾಲ್ಪನಿಕ ಕಥೆಗಳ ನಂಬಿಕೆಗಳು.

ಸತ್ತು ಹೋದ ಆತ್ಮಗಳು ಹಿಂತಿರುಗಿ ಬಂದು ಜೀವಂತವಾಗಿರುವವರ ಮೇಲೆ ಸೇಡು ತೀರಿಸಿಕೊಳ್ಳುವ ಹಾಗೆ **ಚಲನಚಿತ್ರ ಮತ್ತು ಕಥೆಗಳಲ್ಲಿ ತೋರಿಸುತ್ತಾರೆ, ಸತ್ಯವೇದದಲ್ಲಿ ಇದಕ್ಕೆ ಯಾವ ಆಧಾರವಿಲ್ಲ!**

ಕೆಳಗಿನ ವಾಕ್ಯವನ್ನು ಓದುವಾಗ ಇದು ಬಹಳ ಸ್ಪಷ್ಟವಾಗುತ್ತದೆ.....

ಪ್ರಸಂಗಿ 9:10

" ನಿನ್ನ ಕೈಗೆ ಸಿಕ್ಕಿದ ಕೆಲಸವನ್ನೆಲ್ಲಾ ನಿನ್ನ ಪೂರ್ಣ ಶಕ್ತಿಯಿಂದ ಮಾಡು; ನೀನು ಸೇರಬೇಕಾದ ಪಾತಾಳದಲ್ಲಿ ಯಾವ ಕೆಲಸವೂ ಯುಕ್ತಿಯೂ ತಿಳುವಳಿಕೆಯೂ ಜ್ಞಾನವೂ ಇರುವದಿಲ್ಲ. "

ಹೌದು! ಪಾತಾಳ ಅಂದರೆ ಸಮಾಧಿಯಲ್ಲಿ 0ಯಾವ ಕೆಲಸವೂ, 0ಯುಕ್ತಿ0ಯೂ ತಿಳುವಳಿಕೆ0ಯೂ, ಜ್ಞಾನವೂ ಇರುವುದಿಲ್ಲ!

ಹೌದು! ಆತ್ಮವು ಸತ್ತ ನಂತರ **ಅದು ಇರುವುದೇ ಇಲ್ಲ.**

ನಂತರ ಇನ್ನೊಂದು ವಿಷ0ಯವನ್ನು ಕುರಿತು ಓದುತ್ತೇವೆ –

ಕೀರ್ತನೆಗಳು 6:5 / 115:17

" ಮೃತರಿಗೆ ನಿನ್ನ ಜ್ಞಾಪಕವಿರುವದಿಲ್ಲವಲ್ಲಾ; ಪಾತಾಳದಲ್ಲಿ ನಿನ್ನನ್ನು ಸ್ತುತಿಸುವವರು ಯಾರು? "

" ಸತ್ತವರು ಯಾಹುವನ್ನು ಸ್ತುತಿಸುವದಿಲ್ಲ; ಮೌನಲೋಕವನ್ನು ಸೇರಿದವರಲ್ಲಿ ಯಾರೂ ಆತನನ್ನು ಕೀರ್ತಿಸುವದಿಲ್ಲ."

ಹೌದು! ಸತ್ತವರು ದೇವರನ್ನು ಸ್ತುತಿಸುವುದಿಲ್ಲ,

ಏಕೆಂದರೆ ಅವರು **"ಮೌನ ಲೋಕವನ್ನು"** ಸೇರುತ್ತಾರೆ!!

ನಮ್ಮ ರೋಮನ್ ಕಥೋಲಿಕ್ ಸ್ನೇಹಿತರು ಇದನ್ನು ತಿಳಿ0ಯದೆ ವಂಚಿತರಾಗಿ ಸತ್ತವರನ್ನು ಆರಾಧಿಸುತ್ತಾರೆ. ಮರಿಯಳು ಮತ್ತು ಎಲ್ಲಾ ಸಂತರು ಇತರರೆಲ್ಲರಂತೆ ಸತ್ತು **"ಮೌನ ಲೋಕವನ್ನು"** ಸೇರಿದ್ದಾರೆ.



ಇದರ ನಂತರ ಇನ್ನೊಂದು ವಿಷ0ಯವನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.....

ಯೋಬ 7:9,10

"ಮೋಡ ಹರಿದು ಮಾಯವಾಗುವಂತೆ ಪಾತಾಳಕ್ಕೆ ಇಳಿದು ಹೋದವನು ತಿರಿಗಿ ಬರುವದಿಲ್ಲ. ಅವನು ತನ್ನ ಮನೆಗೆ ಪುನಃ ಸೇರುವದಿಲ್ಲ, ಇನ್ನು ಮೇಲೆ ಅವನ ನಿವಾಸವು ಅವನನ್ನು ತಿಳಿಯುವದಿಲ್ಲ."

ಹೌದು! ಸತ್ತವರು ತಮ್ಮ ಮನೆಗೆ ಪುನಃ ಸೇರುವದಿಲ್ಲ!

ಹಿಂದು ಮತ್ತು ಇಸ್ಲಾಮರು ಇದನ್ನು ಅರಿ0ಯದೆ ದೊಡ್ಡ ಮೂಢನಂಬಿಕೆ ಮತ್ತು ಭ0ಯ ತುಂಬಿದವರಾಗಿ "ಸತ್ತವರು" ತಿರುಗಿ ಬಂದು ಅವರಿಗೆ ತೊಂದರೆ ಕೊಡುತ್ತಾರೆ ಅಂದುಕೊಂಡಿದ್ದಾರೆ!!

ಆದ್ದರಿಂದ ಸತ್ತ ದೇಹವನ್ನು ಮನೆಯಿಂದ ಸಮಾಧಿಗೆ ಕೊಂಡೊಯ್ಯುವಾಗ ದಾರಿ0ಯಲ್ಲಿ ಕಡಲೆಪುರಿ0ಯನ್ನು ಚೆಲ್ಲುವ ಅಭ್ಯಾಸವಿದೆ.

ಅವರ ನಂಬಿಕೆ ಏನೆಂದರೆ ಸತ್ತವರು "ಪ್ರೇತ" ಅಥವಾ ದೆವ್ವವಾಗಿ ಆ ರಾತ್ರಿ ಹಿಂತಿರುಗಿ ಮನೆಗೆ ಬರುತ್ತಾರೆ ಮತ್ತು ಕಡಲೆಪುರಿ ಚೆಲ್ಲಿದಾಗ....ಆ "ಪ್ರೇತ" ಅಥವಾ ದೆವ್ವ ಹಿಂತಿರುಗುವಾಗ ಎಲ್ಲಾ ಕಡಲೆಪುರಿ0ಯನ್ನು ಸಂಗ್ರಹಿಸ ಬೇಕಾಗುತ್ತದೆ.....ಮತ್ತು ಅದಕ್ಕೆ ಬಹಳ ಸಮ0ಯ ಬೇಕಾಗುತ್ತದೆ –

.....ಮರುದಿನ ಮುಂಜಾನೆ0ಯೂ ಆಗಬಹುದು!!!

ನಂತರ ಆ "ಪ್ರೇತ" ಅಥವಾ ದೆವ್ವವು ಕೆಲಸ ಮಾಡಲು ಆಗುವುದಿಲ್ಲ ಏಕೆಂದರೆ ಅದು ರಾತ್ರಿ0ಯಲ್ಲಿ ಮಾತ್ರ ಕೆಲಸ ಮಾಡುತ್ತದೆ!

ಆದರೆ 0ಯಾರೂ ಸಹ ಕೆಳಗಿನ ಪ್ರಶ್ನೆ0ಯನ್ನು ಕೇಳುವುದಾಗಲಿ ಅಥವಾ 0ಯೋಚಿಸುದಾಗಲಿ ಇಲ್ಲ–

ಹಾಗಾದರೆ ಮುಂದಿನ ರಾತ್ರಿ ಏನು?????.....ಮತ್ತು ಅದರ ನಂತರದ ರಾತ್ರಿ??

ಕೊನೆ0ಯದಾಗಿ ನಾವು ಹೀಗೆ ಓದುತ್ತೇವೆ.

ಯೋಬ 14:21

"ಅವನ ಮಕ್ಕಳು ಘನತೆಯನ್ನು ಹೊಂದುವದು ಅವನಿಗೆ ತಿಳಿಯುವದಿಲ್ಲ. ಅವರು ಕುಂದಿಹೋಗುವಾಗಲೂ ಅವರ ಸ್ಥಿತಿಯು ಅವನಿಗೆ ಗೋಚರವಾಗುವದಿಲ್ಲ."

ಈ ವಾಕ್ಯವು ಏನನ್ನು ಸೂಚಿಸುತ್ತದೆ ಅಥವಾ ಇದರ ಅರ್ಥವೇನು?

ಅನೇಕರು ಇನ್ನೊಂದು ರೀತಿ0ಯಲ್ಲಿ ವಂಚಿತರಾಗುತ್ತಾರೆ. ಅದೇನೆಂದರೆ, ಅವರು ಬಹುಮಾನವನ್ನು ಪಡೆ0ಯುವಾಗ ತಮ್ಮ ಸತ್ತ ತಂದೆ – ತಾಯಿ ಅಥವಾ ಸ್ನೇಹಿತರು ನೋಡುತ್ತಾರೆಂದು ನಂಬುತ್ತಾರೆ. ಅಥವಾ ಸಮಾರಂಭಗಳಲ್ಲಿ ಬಹುಮಾನವನ್ನು ಜಯಿಸಿದವನು ಆಕಾಶದ ಕಡೆಗೆ ನೋಡುತ್ತಾ ಸ್ವಲ್ಪಕಾಲದ ಹಿಂದೆ **ಸತ್ತ ಅವನ ಕುಟುಂಬದ ಸದಸ್ಯರನ್ನು** ನೆನಪು ಮಾಡಿಕೊಳ್ಳುತ್ತಾರೆ. ಅವರು ಆ ಕ್ಷಣದಲ್ಲಿ ಅವನನ್ನು ನೋಡುತ್ತಿರುತ್ತಾರೆಂದು ನಂಬುತ್ತಾನೆ!!

ಮತ್ತು ಅದು ಎಂತಹ ಭಾವನಾತ್ಮಕ ಕ್ಷಣವಾಗಿರುತ್ತದೆ!!

ಇಂತಹ ದೃಶ್ಯವನ್ನು ನೋಡಿ ಇದು **ನಿಜವೆಂದು** ತಿಳಿದುಕೊಂಡು ಎಷ್ಟೋ ಜನ ಕಣ್ಣೀರು ಹಾಕುತ್ತಾರೆ!

ಆದರೆ ಇದು ಹಾಗಲ್ಲ ಎಂದು ಸತ್ಯವೇದವು ನಮಗೆ ಬೋಧಿಸುತ್ತದೆ!!

ಹೌದು! ಸೈತಾನನು ಮನುಕುಲವನ್ನು

"ದೆವ್ವಗಳ" ಮೂಲಕ

.....ಮತ್ತು ಸತ್ತವರ ಬಳಿ ಮಾತನಾಡುವುದರ ಮೂಲಕ ವಂಚಿಸುತ್ತಿದ್ದಾನೆ!!

ಆದರೆ ಕರ್ತನು ಬೋಧಿಸುವ ಹಾಗೆ, ಸತ್ಯವು ಒಬ್ಬನನ್ನು ಬಿಡುಗಡೆ ಮಾಡುತ್ತದೆ –

ಯೋಹಾನ 8:32

" .... ಸತ್ಯವನ್ನು ತಿಳಿದುಕೊಳ್ಳುವಿರಿ;ಮತ್ತು ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವದು ಎಂದು ಹೇಳಿದನು "



ಹೌದು ! ಈ ದಿನ ನಾವು ಆತ್ಮದ ಬಗ್ಗೆ ವಾಕ್ಯದ ಮೂಲಕ ಸತ್ಯವನ್ನು ತಿಳಿದುಕೊಂಡಿದ್ದೇವೆ ಮತ್ತು ಈ ವಾಕ್ಯದ ಮೂಲಕ.....

ಈ ದಿನ ನಾವು ಸತ್ಯವೇದದಲ್ಲಿ ಆತ್ಮದ ಬೋಧನೆ0ಯನ್ನು ವಿಚಾರ ಮಾಡಿದ್ದೇವೆ.

ಆದರೆ ಸತ್ಯವೇದದಲ್ಲಿನ ಕೆಲವು ವಾಕ್ಯಗಳು, "ಆತ್ಮ"ವು **ಸತ್ತ ನಂತರವೂ ಜೀವಿಸುತ್ತದೆ** ಎಂಬ ಮನೋಭಾವನೆ0ಯನ್ನು ಕೊಡುತ್ತದೆ.

ರಾಜನಾದ ಸೌಲನು ಸತ್ತವರಲ್ಲಿ ವಿಚಾರಿಸಬಲ್ಲ ಸ್ತ್ರೀ0ಯನ್ನು ಭೇಟಿ0ಯಾಗಿ ಸತ್ತುಹೋದ ಸಮುವೇಲನ "ಆತ್ಮ"ದೊಂದಿಗೆ ಮಾತನಾಡಲು ಹೋಗುತ್ತಾನೆ.
(1 ಸಮುವೇಲನು 28:7–19)

0ಯೇಸು ಬೆಟ್ಟಕ್ಕೆ ಹೋಗಿ ಪ್ರಕಾಶರೂಪವನ್ನು ಹೊಂದುವದು ಮತ್ತು ಸತ್ತ "ಆತ್ಮಗಳಾದ" ಮೋಶೆ0ಯೂ ಎಲೀ0ಯನೂ 0ಯೇಸುವಿನೊಂದಿಗೆ ಮಾತನಾಡುವದು (ಮತ್ತಾ0ಯ 17:1–3)

ಕಲ್ವಾರಿ ಶಿಲುಬೆ0ಯಲ್ಲಿನ ಕಳ್ಳನು.....ಮತ್ತು ಇದರ ಬಗ್ಗೆಯಿರುವ ನಂಬಿಕೆ ಏನೆಂದರೆ ಅವನ "ಆತ್ಮ" ತತ್‌ಕ್ಷಣ ಪರಲೋಕಕ್ಕೆ ಏರಿಹೋಯಿತು.
(ಲೂಕ 23:42,43)

ಲಾಜರನು ಮತ್ತು ಐಶ್ವ0ರ್ಯವಂತನ ಕಥೆ.....ಮತ್ತು ಅವರು ಸತ್ತ ನಂತರದ ಜೀವಿತದ ಅನುಭವ
(ಲೂಕ 16:19–31)

ಹೌದು! ಇವೆಲ್ಲವೂ ಆತ್ಮದ ವಿಷ0ಯಕ್ಕೆ "ಸತ್ಯವೇದದಲ್ಲಿ ಪರಸ್ಪರ" ವಿರೋಧವಾಗಿದೆ. ಇವುಗಳನ್ನು ಕುರಿತು ಆತ್ಮದ ಭಾಗ – 2 ರಲ್ಲಿ ಅಭ್ಯಾಸ ಮಾಡೋಣ.

"ಆಮೆನ್"



For more Subjects contact: MESSENGERS OF CHRIST E-mail: thekingdom1_6@yahoo.com

NOT FOR SALE

For Private Circulation Only